ಎಂ ವಿ ಸಿ ನಂಃ 35/2023

ಪಿ. ಡಬ್ಲ್ಯೂ-3

**(ಇಂದು ದಿನಾಂಕ 21-05-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಖ್ಯವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ .

ಸಾಕ್ಷಿ ನಿಪಿ.20 ಮತ್ತು 21 ರಲ್ಲಿರುವ ಸಹಿ ಗುರುತಿಸಿದ್ದು ಅವುಗಳನ್ನು **ನಿಪಿ.20 ಎ ಮತ್ತು ನಿಪಿ.21 ಎ** ಎಂದು ಗುರುತಿಸಲಾಯಿತು. ಅದರಲ್ಲಿರುವ ಮಾಹಿತಿಯನ್ನು ನಾನೇ ಬರೆದಿರುತ್ತೇನೆ.

**ಪಾಟೀಸವಾಲುಃ 2 ನೇ ಎದುರುದಾರರ ಪರ ವಕೀಲರಿಂದ**

1. ನಾನು ಬಿ ಕಾಂ ಪದವಿಧರ. ನಿಪಿ.20 ಮತ್ತು 21 ಫೈನಾಶಿಯಲ್ ವರುಷದ ದಾಖಲೆಗಳು. ಸದರಿ ದಾಖಲೆಗಳನ್ನು ತಯಾರು ಮಾಡಬೆಕಾದರೇ ಅಡಿಟ್ ವರದಿ ಬೇಕಾಗುತ್ತದೆ ಎಂದರೆ ಸರಿ. ಅಡಿಟ್ ವರದಿ ತಯಾರು ಮಾಡುವ ಅಧಿಕಾರ ನನಗೆ ಇಲ್ಲ ಎಂದರೆ ಸರಿ. ಕಾನೂನು ಪ್ರಕಾರ ವರಮಾನವು 1 ಲಕ್ಷಕ್ಕಿಂತ ಹೆಚ್ಚು ಇದ್ದರೇ ಅಡಿಟ್ ಆಗಬೆಕು ಎಂದರೆ ಸರಿಯಲ್ಲ. ಐಟಿ ಫಾರಂ ಗಳನ್ನು ನಾವೇ ಕೊಡುತ್ತೇವೆ. ಐಟಿ ಫಾರಂಗಳನ್ನು ಜಿ ಎಸ ಟಿ ಪ್ರಾಕ್ಟಿಷನರ್ ಕೊಡಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿಪಿ.14 2022-2023 ರ ಸಾಲಿನ

ಎಂ ವಿ ಸಿ ನಂಃ 35/2023
ಪಿ. ಡಬ್ಲ್ಯೂ-3

ಅಸೆಸಮೆಂಟ ಇಯರಗೆ ಸಂಬಂದಿಸಿದ ದಾಖಲೆ ಎಂದರೆ ಸರಿ. ನಿಪಿ.20 ಮತ್ತು 21 2021-2022 ರ ಆರ್ಥಿಕ ವರುಷದ ದಾಖಲೆ ಎಂದರೆ ಸರಿ. ಬ್ಯಾಲನ್ಸ ಶಿಟಗಳನ್ನು 3 ವರುಷದ ವ್ಯವಹಾರ ಬಗೆಗ ನಮೂದು ಇರುತ್ತದೆ ಎಂದರೆ ಸಾಕ್ಷಿ ನಿಪಿ.20 ಮತ್ತು 21 ವರುಷಕೊಮ್ಮೆ ಸಲ್ಲಿಸಬೆಕಾಗುತ್ತದೆ. 2019-2020 ಹಾಗೂ 2020-2021 ರ ಬ್ಯಾಲನ್ಸ ಶೀಟ ದಾಖಲೆ ಇರುವುದಿಲ್ಲ. ನಿಪಿ.20 ಮತ್ತು 21 ಸಲ್ಲಿಸುವ ಕಾಲಕ್ಕೆ ಕೊವಿಡ ಸಾಂಕ್ರಾಮಿಕ ರೋಗ ಇನ್ನು ಇತ್ತು ಎಂದರೆ ಸರಿ. ಆ ಸಮಯದಲ್ಲಿ ಯಾವದೇ ಕಾರ್ಮಿಕರು ಕೆಲಸ ಮಾಡುತ್ತಿದ್ದಿಲ್ಲ ಎಂದರೆ ಸರಿಯಲ್ಲ. ನಿಪಿ.20 ರ ಪ್ರಕಾರ ಮೃತ ಕಿರಣ ರವರು ವಾರ್ಷಿಕ ಅದಾಯ ರೂ.27,51,513.65 ಆದಾಯ ಇತ್ತು. ಸದರಿ ಸಚಿನ ಎಂಟರಪ್ರೈಸಸ್ ಖಾತೆಯನ್ನು ನಾನು ಈಗ ಪರಿಶೀಲನೆ ಮಾಡುತ್ತಿಲ್ಲ. ಸದರಿ ಎಂಟರಪ್ರೈಸಸ್ ನ್ನು ಈಗ 1 ನೇ ಅರ್ಜಿದಾರರು ನಡೆಸಿಕೊಂಡು ಹೊಗುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 1 ನೇ ಅರ್ಜಿದಾರರ ಖಾತೆಯನ್ನು ಇವತ್ತಿಗೂ ನಾನೇ ಪರಿಶೀಲನೆ ಮಾಡುತ್ತಿದ್ದರು ಸಹ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಸಚಿನ ಎಂಟರಪ್ರೈಸಸ್ 1 ನೇ ಅರ್ಜಿದಾರು ಹಾಗೂ ಮೃತ ಕಿರಣ ರವರ ಜಂಟಿ ಖಾತೆಯಾಗಿತ್ತು ಎಂದರೆ ಸರಿಯಲ್ಲ. ನಾನು ಜಿ ಎಸ ಟಿ ಫ್ರಾಕ್ಟಕ್ಷನರ್ ಆಗಿರದೇ ಇರುವ ಕಾರಣ ನಿಪಿ.20 ಮತ್ತು 21 ಕೊಡುವ ಅಧಿಕಾರ ಇಲ್ಲಃದೇ ಇದ್ದರು ಅವರಿಗೆ ಸಹಾಯ ಮಾಡಲು ಅವುಗಳನ್ನು ಕೊಟ್ಟಿದ್ದೆನೆ ಎಂದರೆ ಸರಿಯಲ್ಲ.

ಎಂ ವಿ ಸಿ ನಂಃ 35/2023
ಪಿ. ಡಬ್ಲ್ಯೂ-3

( 1 ನೇ ಎದುರುದಾರರ ಪರ ವಕೀಲರು 2 ನೇ ಎದುರುದಾರರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳಡಿಸಿಕೊಳ್ಳಲು ಕೋರಿದ್ದು ಅನುಮತಿಸಲಾಯಿತು)

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.